**SC No.23/2024**
**PW-9**

## 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

## ಎಸ್. ಸಿ.23/2024

| ಸಾಕ್ಷಿದಾರರ ಹೆಸರು | ಕುಮಾರ | ಪ್ರಮಾಣ ವಚನ ಮಾಡಿದ ದಿನಾಂಕ: 04.02.2026 |
|---|---|---|
| ತಂದೆಯ ಹೆಸರು | ಮರಿಸಿದ್ದಯ್ಯ | |
| ವಯಸ್ಸು | 47 ವರ್ಷ | |
| ವೃತ್ತಿ | ಶಿಕ್ಷಕರು | ಚಾ.ಸಾಃ 7 |
| ವಾಸ ಸ್ಥಳ | ಕೆಸರೇ | ಫ್ರಾ.ಸಾಃ 9 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

1. ನಾನು ತುಮಕೂರು ಜಿಲ್ಲೆಯ ಹುಲಿಯೂರು ದುರ್ಗದಲ್ಲಿರುವ ವಿವೇಕಾನಂದ ಶಾಲೆಯಲ್ಲಿ ಶಿಕ್ಷಕನ್ನಾಗಿ ಕೆಲಸ ಮಾಡಿಕೊಂಡಿದ್ದೆನು. ನಾನು ಹಳೆ ಕಸರೇಯ ಗಂಗಾ ನಗರ ಲೇ ಔಟ್ ನಲ್ಲಿ ವಾಸವಾಗಿರುತ್ತೇನೆ. ಸುನಿಲಕುಮಾರ ಎಂಬುವವರು ನನಗೆ ಗೊತ್ತಿದ್ದರು, ಅವರು ಸಹ ನಮ್ಮ ಲೇಔಟ್ ನಲ್ಲಿ ವಾಸವಾಗಿದ್ದರು.

2. ಸುನಿಲಕುಮಾರ ನನಗೆ ಕರೆ ಮಾಡಿರುವುದಿಲ್ಲ ಮತ್ತು ತನ್ನ ತಾಯಿ ಪ್ರಜ್ಞೆ ತಪ್ಪಿ ಬಿದಿದ್ದಾರೆ ಮನೆ ಹತ್ತಿರ ಹೋಗಿ ನೋಡು ಎಂದು ಹೇಳಿರಲಿಲ್ಲ, ನಾನು ಅವರ ಮನೆಯ ಹತ್ತಿರ ಹೋಗಿರಲಿಲ್ಲ ಮತ್ತು ಅವರ ತಾಯಿ ಮಂಜುಳಾ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿರುವುದಿಲ್ಲ, ನನಗೆ ಈ ಪ್ರಕರಣದ ಬಗ್ಗೆ ಯಾವುದೇ

ಮಾಹಿತಿ ಇರುವುದಿಲ್ಲ. ಪೊಲೀಸರು ಒಂದು ಸಹಿ ತೆಗೆದುಕೊಂಡಿದ್ದರು. ಏನು ಹೇಳಿಕೆ ಮಾಡಿಕೊಂಡಿದ್ದರು ಎನ್ನುವ ಬಗ್ಗೆ ನನಗೆ ಗೊತ್ತಿರುವುದಿಲ್ಲ.

**ಈ ಹಂತದಲ್ಲಿ , ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

3. ಸುನಿಲಕುಮಾರ ನಮ್ಮ ಲೇಔಟ್ ನಲ್ಲಿ ವಾಸವಾಗಿದ್ದು ನನಗೆ 2 ವರ್ಷಗಳಿಂದ ಪರಿಚಯವಾಗಿದ್ದರು ಎಂದರೆ ಸರಿ. ದಿ.29.03.2023 ರಂದು ರಾತ್ರಿ 8.15 ಗಂಟೆ ಸಮಯದಲ್ಲಿ ಸುನಿಲಕುಮಾರ ನನಗೆ ಫೋನ್ ಮಾಡಿ ತನ್ನ ತಾಯಿ ಪ್ರಜ್ಞೆ ತಪ್ಪಿ ಬಿದಿದ್ದಾರೆ ಮನೆ ಹತ್ತಿರ ಹೋಗಿ ನೋಡಿ ಎಂದು ಹೇಳಿದ್ದರು ಎಂದರೆ ಸರಿ. ನಾನು ಸುನಿಲಕುಮಾರರವರ ಮನೆ ನಂ.75ರ ಬಳಿಗೆ ಹೋಗಿ ನೋಡಿದಾಗ ನಮ್ಮ ಏರಿಯಾದಲ್ಲಿರುವ ವಾಸವಾಗಿರುವ ಯೇಸುರವರ ಹೆಂಡತಿ ಅನೀತಾ ಮತ್ತು ರೀಂಟಾ ಮನೆಯ ಬಳಿ ಇದ್ದರು ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಾವುಗಳು ಮನೆಯ ಬಾಗಿಲನ್ನು ತೆಗೆಯಲು ಪ್ರಯತ್ನಿಸಿದ್ದೆವು ಎಂದರೆ ಸರಿಯಲ್ಲ. ಮಂಜುಳಾ ರವರನ್ನು ಬಾಗಿಲು ತೆಗೆಯುವಂತೆ ಕೂಗುತ್ತಿದ್ದಾಗ ಮಂಜುಳಾ ರವರು ಬಾಗಿಲನ್ನು ತೆಗೆದು ಕೆಳಕ್ಕೆ ಬಿದ್ದು ಹೋದರು ಎಂದರೆ ಸರಿಯಲ್ಲ. ನಾವುಗಳು ಮಂಜುಳಾರವರಿಗೆ ನೀರನ್ನು ಕುಡಿಸಿ ವಿಚಾರಿಸಿದ್ದಾಗ ಗಾರೆ ಕೆಲಸ ಮಾಡಿಕೊಂಡಿದ್ದ ದೀಪು ಮನೆಯೊಳಗೆ ಬಂದು ಗಂಟಲು

ನೋವು ಇರುತ್ತದೆ, ನೀರನ್ನು ಕಾಯಿಸಿ ಕೊಡಿ ಎಂದು ಕೇಳಿದ್ದ, ನೀರನ್ನು ಕಾಯಲು ಇಟ್ಟು ವಾಪಸ್ ಬರುತ್ತಿದ್ದಾಗ ದೀಪು ಮನೆಯೊಳಗೆ ಬಂದು ಬಾಗಿಲಿನ ಬೋಲ್ಟನ್ನು ಹಾಕಿ ಚೆಂಬಿನಿಂದ ನನ್ನ ಮುಖಕ್ಕೆ ಹೊಡೆದಿದ್ದನು ಎಂದು ಮಂಜುಳಾ ಹೇಳಿದ್ದರು ಎಂದರೆ ಸರಿಯಲ್ಲ. ತನ್ನ ಮುಖಕ್ಕೆ ಬಲವಾಗಿ ಹೊಡೆದಿದ್ದರಿಂದ ರಕ್ತ ಬಂದು ಕೆಳಗೆ ಬಿದಿದ್ದೆ , ಆಗ ದೀಪು ಟವಲನ್ನು ಬಾಯಿಗೆ ಹಾಕಿ ಹೊಡೆದು ಚಿನ್ನದ ಸರ ಮತ್ತು ಓಲೆಯನ್ನು ಕಿತ್ತುಕೊಂಡು ಹೊರಟು ಹೋಗಿರುತ್ತಾನೆ ಎಂದು ನನಗೆ ಹೇಳಿದರು ಎಂದರೆ ಸರಿಯಲ್ಲ. ನಾನು, ಯೇಸು ರವರು ಮಂಜುಳಾರವರನ್ನು ಆಟೋದಲ್ಲಿ ಕೂರಿಸಿಕೊಂಡು ಪ್ರಜ್ವಲ್ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಸುನಿಲಕುಮಾರರವರಿಗೆ ಪರಿಚಯ ಇರುವ ಅದೇ ಆಸ್ಪತ್ರೆ ಟೆಕ್ನೆಷಿಯನ್ ಮಂಜುಳಾ ರವರನ್ನು ಆಸ್ಪತ್ರೆಗೆ ಸೇರಿಸಿಕೊಂಡಿದ್ದರು ಎಂದರೆ ಸರಿ. ನಾನು ಈಗ ಓದಿ ಹೇಳಿದ ನಿಪಿ–22 ರಂತೆ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ :</u>**

4. ಆರೋಪಿತರ ಪರ ವಕೀಲರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

**ಮರವಿಚಾರಣೆ: ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮೈಸೂರು.**